ಕಲೆ: ಜಮೀವುಲ್ಲಾ ಎಂ. ಅಸದ್



**ನಾಂದಿಪದ**

# ಮಳೆಋತುವಿನ ಭಾವ–ಬಣ್ಣ

ಮಳೆ ಸೃಷ್ಟಿಕ್ರಿಯೆಯ ರೂಪಕ. ಒಂದಲ್ಲಾ ಒಂದು ಬಗೆಯಲ್ಲಿ ಮಳೆಯ ಸ್ಪರ್ಶಕ್ಕೊಳಗಾಗದ ದೇಶ–ಕಾಲಗಳಿಲ್ಲ; ವ್ಯಕ್ತಿಯಿಲ್ಲ. ಕವಿಗಳ ಪಾಲಿಗಂತೂ ಮಳೆ ಅಮೃತವರ್ಷಿಣಿ. ಈ ಜೀವದಾಯಿನಿ ಮಳೆಋತು ಚಾಲ್ತಿಯಲ್ಲಿರುವ ಸಂದರ್ಭದಲ್ಲಿ, ಮಳೆಯ ಆರ್ದ್ರತೆ ಹಾಗೂ ಬಿಸುಪನ್ನು ಈ ಸಂಚಿಕೆ ಚದುರಿದಂತೆ ಹಿಡಿದಿಟ್ಟಿದೆ. ಕವಿ ಸುಬ್ಬು ಹೊಲೆಯಾರ್ ಅವರ ಪ್ರಬಂಧರೂಪದ 'ಮಳೆಗನ್ನಡಿ', ಜನಪ್ರಿಯ ಸಾಹಿತ್ಯದಲ್ಲಿನ ಮಳೆಯ ಕುರಿತ ರಮ್ಯ ಚಿತ್ರಗಳ ಚೌಕಟ್ಟಿನಿಂದ ಭಿನ್ನವಾದ ಬರಹ. ಕವಿಯ ಬಾಲ್ಯದ ನೆನಪುಗಳಲ್ಲಿ ಮಳೆ ಸಂತಸ ಉಂಟುಮಾಡಿರುವಂತೆ ನೋವಿಗೂ ಕಾರಣವಾಗಿದೆ. ಆತ್ಮಕಥನದ ಒಂದು ಅಧ್ಯಾಯದಂತೆಯೂ ಓದಿಕೊಳ್ಳಬಹುದಾದ ಈ ಬರಹ, ಅನಂತಮೂರ್ತಿ ಅವರ ಮಳೆ ಕವಿತೆಯಿಂದ ಆರಂಭಗೊಂಡು, 'ಮಲೆಗಳಲ್ಲಿ ಮದುಮಗಳು', 'ಒಡಲಾಳ'ದವರೆಗೂ ಹಬ್ಬಿಕೊಂಡಿದೆ; ಆ ಮೂಲಕ ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಮಳೆಯ ಶಕ್ತಿಯನ್ನು ಸಹೃದಯರಿಗೆ ಕಾಣಿಸುವಂತಿದೆ. ವಿವಿಧ ವಯೋಮಾನದ ಕಥೆಗಾರರ ಕಾಮನಬಿಲ್ಲಿನ ಬಣ್ಣಗಳಂತಹ ಏಳು ಕಥೆಗಳು ಮಳೆಋತುವಿನ ಜೀವಫಲಗಳಂತಿವೆ.

ಹಿಂದಿ ಸಾಹಿತ್ಯ ವಿಮರ್ಶಕ ಪ್ರೊ. ರಾಜಕುಮಾರ್ ಅವರೊಂದಿಗೆ ಕನ್ನಡದ ವಿಮರ್ಶಕ ವಿಕ್ರಮ ವಿಸಾಜಿ ನಡೆಸಿರುವ ಆಪ್ತ ಮಾತುಕತೆ ಹಾಗೂ ಕೆನಡಾದಲ್ಲಿ ನೆಲೆಸಿರುವ ಕನ್ನಡದ ಉತ್ಸಾಹಿ ಬರಹಗಾರ ಶಶಿಕುಮಾರ್ ಅವರ 'ಅಂಬೇಡ್ಕರ್‌ವಾದಿ ಯಾರು?' ಬರಹ ಈ ಸಂಚಿಕೆಯ ವಿಶೇಷಗಳಲ್ಲಿ ಮುಖ್ಯವಾದವು. ಹಿಂದಿ ಸಾಹಿತ್ಯ ವಿಮರ್ಶೆಯ ಒಲವು ಮತ್ತು ಪರಿಣಾಮಗಳನ್ನು ಕುರಿತು ಚರ್ಚಿಸುವ ಸಂದರ್ಶನ, ಹಿಂದಿ ಭಾಷೆಯ ಚೌಕಟ್ಟನ್ನು ಮೀರಿ ಎಲ್ಲ ನುಡಿಗಳ ಸಾಹಿತ್ಯದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತಿದೆ. 'ಅಂಬೇಡ್ಕರ್‌ವಾದಿ'ಯ ಚಹರೆಗಳನ್ನು ಶೋಧಿಸುವ ಪ್ರಯತ್ನದ ಚಿಂತನೆ, ಈ ಹೊತ್ತಿನ ದಲಿತ ವೈಚಾರಿಕತೆಗೆ ಹೊಸ ನೀರು ಸೇರಿಸುವಂತಹದ್ದು. ಅಂಬೇಡ್ಕರ್ ಮಳೆಯಲ್ಲಿ ತೋಯಿಸುವ ಈ ಬರಹ, ಅಂಬೇಡ್ಕರ್‌ವಾದಿಗೆ ಇರಬೇಕಾದ ನೈತಿಕ ಎಚ್ಚರ ಮತ್ತು ಜವಾಬ್ದಾರಿಯತ್ತ ಗಮನಸೆಳೆಯುತ್ತದೆ.

**ಮಯೂರ ಬಳಗ**

editormy@mayura.co.in